ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿರುವ ಸ್ಮಶಾನ ಭೂಮಿಗಳ ವಿಸ್ತೀರ್ಣ.

888(1306) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) :— ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ- ಧಾರವಾಡ ಮಹಾನಗರದಲ್ಲಿರುವ ಸ್ಮಶಾನ ಭೂಮಿಗಳ ಒಟ್ಟು ಸಂಖ್ಯೆ ಎಷ್ಟು; ಅವುಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಆ) ಹುಬ್ಬಳ್ಳಿ ಗ್ರಾಮೀಣ ಕ್ಷೇತ್ರದಲ್ಲಿ ಬರತಕ್ಕ ನಾಗಶೆಟ್ಟಿಕೊಪ್ಪ ಮತ್ತು ಆನಂದನಗರ ಭಾಗಗಳು ಸಾಕಷ್ಟು ಬೆಳವಣಿಗೆ ಆಗಿದ್ದು ಆ ಭಾಗದಲ್ಲಿ ಸ್ಮಶಾನ ಭೂಮಿಗಳ ಅವಶ್ಯಕತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :—

ಅ) 50 ಸ್ಮಶಾನಗಳು. ಅವುಗಳ ಅಭಿವೃದ್ಧಿಗಾಗಿ ಹುಬ್ಬಳ್ಳಿ-ಧಾರವಾಡ ಮಹಾನಗರಪಾಲಿಕೆ 1998-99ನೇ ಸಾಲಿನಲ್ಲಿ ರೂ. 9.92 ಲಕ್ಷಗಳು ಖರ್ಚು ಮಾಡಿದೆ.

ಆ) ಹೌದು. ನಾಗಶೆಟ್ಟಿಕೊಪ್ಪ ಗ್ರಾಮಕ್ಕೆ ಸ್ಮಶಾನ ಸೌಲಭ್ಯ ಕಲ್ಪಿಸುವುದಕ್ಕಾಗಿ ಕರ್ನಾಟಕ ಪುರಸಭೆಗಳ ಅಧಿನಿಯಮ 1976ರ ಕಲಂ 125 ರಂತೆ ಆರ್.ಎಸ್. ನಂ. 123 ರಲ್ಲಿ 5 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಕ್ರಮ ಪ್ರಾರಂಭಿಸಿದೆ. ಆನಂದನಗರ ಗ್ರಾಮಸ್ಥರು ಈಗ ಉಪಯೋಗಿಸುತ್ತಿರುವ ಜಮೀನು ಅರಣ್ಯ ಇಲಾಖೆಗೆ ಸೇರಿದ್ದು ಅದನ್ನು ಹಸ್ತಾಂತರಿಸುವಂತೆ ಮಹಾನಗರಪಾಲಿಕೆ ಕೋರಲಾಗಿದ್ದು ಹಸ್ತಾಂತರಿಸಿದ ನಂತರ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಲಾಗುವುದು.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ಆಸ್ತಿಗಳ ಮೌಲ್ಯ ಪುನರ್‌ವಿಮರ್ಶೆ.

889(1307) ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮಾಂತರ) :— ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಹುಬ್ಬಳ್ಳಿ- ಧಾರವಾಡ ಮಹಾನಗರದಲ್ಲಿ ಸ್ಥಿರಾಸ್ತಿಯ ವರ್ಗಾವಣೆಯ ನೋಂದಣಿ ಸಂಬಂಧಪಟ್ಟಂತೆ ಸ್ಟ್ಯಾಂಪ್ ಡ್ಯೂಟಿ ಹಾಗೂ ರಿಜಿಸ್ಟ್ರೇಷನ್ ಆಕರಣೆ ಸಂಬಂಧಿಸಿದಂತೆ ಆಸ್ತಿಗಳ ಮೌಲ್ಯೀಕರಣ ಪುನರ್‌ವಿಮರ್ಶಿಸಿ ಕಡಿಮೆ ಮಾಡಲಾಗುವುದು ಎಂದು ಸರ್ಕಾರ ಈ ಹಿಂದೆ ಭರವಸೆ ನೀಡಿದ್ದು ನಿಜವೆ. ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು;